ಐತಿಹಾಸಿಕ ಅಧಿಕೃತತೆಯ ತಳಹದಿಯ ಮೇಲೆ ಒಂದು ತಟ್ಟುವ, ಸರ್ವ ಕಾಲಕ್ಕೂ ಸಲ್ಲುವ ಜಗತ್ತೊಂದರ ಸೃಷ್ಟಿಯನ್ನು ಹಿರೇಮಠರು ನಿರ್ಮಿಸಿದ್ದಾರೆ.

ಕಾದಂಬರಿಯುದ್ದಕ್ಕೂ ಬಂದು ಹೋಗುವ ಎಲ್ಲ ವ್ಯಕ್ತಿಗಳೂ ಘಟಿಸುವ ಎಲ್ಲ ಘಟನೆಗಳಲ್ಲಿ ಸಜೀವ ಪಾತ್ರ ವಹಿಸುವರು. ಭಾರತ ದೇಶ ಬ್ರಿಟಿಷ್ ಆಳ್ವಿಕೆಯಿಂದ ಮುಕ್ತವಾಗಿ ಸ್ವತಂತ್ರ ಆದ ಸಂದರ್ಭದಲ್ಲಿ, ಇಡೀ ದೇಶವೇ ಹೊಸ ಉತ್ಸಾಹ, ಖುಷಿಯಲ್ಲಿ ತೇಲುತ್ತಿರುವಾಗ, ಹೈದರಾಬಾದ್ ಸಂಸ್ಥಾನದ ನಿಜಾಮ ಸ್ವತಂತ್ರ ರಾಷ್ಟ್ರವಾಗಿ ತನ್ನ ಅಧಿಪತ್ಯವನ್ನು ನಡೆಸುವ ನಿರ್ಧಾರ ಕೈಗೊಳ್ಳುವನು. ಸಹಜವಾಗಿ ಆ ಪ್ರಾಂತದ ಜನ ತಲ್ಲಣಗೊಳ್ಳುವರು. ರಜವಿಯ ಕುತಂತ್ರದ ಫಲವಾಗಿ ನಿಜಾಮನ ಮೊಂಡಾಟ ಮತ್ತೂ ಹೆಚ್ಚಾಗುವುದು. ಜನಸಾಮಾನ್ಯರೆಲ್ಲರೂ ಭಾರತ ಒಕ್ಕೂಟದ ಭಾಗವಾಗಲು ಹಾತೊರೆಯುತ್ತಿದ್ದರೂ, ನಿಜಾಮ ಮತ್ತು ಆತನ ಕೂಟದಿಂದ ಯಾವ ಬೆಂಬಲವೂ ಸಿಗದು. ಇಲ್ಲಿಯೇ ಅಂಕುರವಾಗುವುದು ಹಾವಳಿ. ಜನಸಾಮಾನ್ಯರ ನ್ಯಾಯಯುತ, ಸಹಜ ಆಕಾಂಕ್ಷೆಗಳನ್ನು ಹತ್ತಿಕ್ಕಲು ರಜಾಕಾರರ ಹಾವಳಿ. ಇದಕ್ಕೆ ಜನಶಕ್ತಿಯ ಅದಮ್ಯ ಪ್ರತಿರೋಧ. ಸ್ವಯಂಸ್ಫೂರ್ತಿ ಈ ಪ್ರತಿರೋಧದ ಶಕ್ತಿ. ನಿಜಾಮರ ದಮನಶಕ್ತಿ ಜನಶಕ್ತಿಯನ್ನು ಹತ್ತಿಕ್ಕಿದಷ್ಟೂ, ಜನಶಕ್ತಿ ಇನ್ನೂ ಸಂಘಟಿತಗೊಂಡು ಪ್ರಬಲವಾಗುವದು. ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆದ ಈ ಹೋರಾಟದಲ್ಲಿ, ಸಾಕಷ್ಟು ವೈಯಕ್ತಿಕ ಸಾವುನೋವು ಸಂಭವಿಸಿದರೂ, ಮುಗ್ಧ ಬದುಕುಗಳು ಮೂರಾಬಟ್ಟೆಯಾದರೂ ಜನಶಕ್ತಿ ಲೆಕ್ಕಿಸಲಿಲ್ಲ. ಭಾರತ ಸರ್ಕಾರದ ಸಕಾಲಿಕ ಪ್ರವೇಶದೊಂದಿಗೆ ಜನಶಕ್ತಿಯ ಅಂತಿಮ ವಿಜಯವಾಗಿ, ಹೈದರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನವಾಗುವದು. ಭಾರತೀಯ ಇತಿಹಾಸದ ಈ ಪುಟ 'ಹಾವಳಿ' ಕಾದಂಬರಿಯ ಕಥಾಹಂದರ.

ಬಸಾಪುರದ ಚಾವಡಿ ಕಟ್ಟೆಯ ಮೇಲೆ ವಿಮೋಚನಾ ಹೋರಾಟದ ರೂಪರೇಷೆಗಳು ಸಿದ್ಧವಾಗುವವು; ಚಳವಳಿಯ ಸ್ವರೂಪ ಮತ್ತು ಭಾಗವಹಿಸುವಿಕೆಯ ಸೂಚನೆ ಸಿಗುವುದು. ಶಂಕರ, ಶೇಖರ, ವಸಂತ, ಕುಮಾರ್, ರಹಮಾನ್, ಸಂಗ ಹಾಗೂ ಊರಿನ ಕೆಲ ಉತ್ಸಾಹಿಗಳ ಸಂಘಟನೆ ಈ ಹೋರಾಟಕ್ಕೆ ನಾಂದಿ ಹಾಡಿದರೂ, ಎಲ್ಲ ಚಳವಳಿಗಳಲ್ಲಿ ಆಗುವಂತೆ ಹಿತಾಸಕ್ತಿಗಳ ಪ್ರಭಾವ ಇಲ್ಲಿಯೂ ಕಾಣಿಸಿಕೊಂಡು, ಹೋರಾಟ ಜಟಿಲಗೊಳ್ಳುವ ಎಲ್ಲ ಸಾಧ್ಯತೆಗಳು ಗೋಚರಿಸಲಾರಂಭಿಸುತ್ತವೆ. ಆದರೂ, ಎಲ್ಲ ಅಡೆತಡೆಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಹೋರಾಟಗಾರರ ಅಚಲವಾದ ಗುರಿಯಲ್ಲಿ ಇದೆ. ಯೇಟ್ಸ್ ಕವಿಯ ಪ್ರಖ್ಯಾತ 'Easter 1916' ಕವನವನ್ನು ನೆನಪಿಸುವದು ಈ ಜನಸಾಮಾನ್ಯರ ಅಚಲ ನಂಬಿಕೆ ಮತ್ತು ಹೋರಾಟದಲ್ಲಿ ಭಾಗವಹಿಸುವಿಕೆ. ಯೇಟ್ಸ್ ಕವಿ ಹೇಳುವಂತೆ:

**Hearts with one purpose alone**
**Through summer and winter seem**
**Enchanted into a stone**
**To trouble the living stream.**

ಬಸಾಪುರದ ಹೋರಾಟಕ್ಕೆ ಇದಕ್ಕಿಂತ ಹೆಚ್ಚಿನ ಹೋಲಿಕೆ ಸಿಗದು ಎಂದುಕೊಂಡಿದ್ದೇನೆ. ಪ್ರತಿಯೊಬ್ಬ ಜನಸಾಮಾನ್ಯನೂ ತನಗೇ ಆಶ್ಚರ್ಯ ಆಗುವ ರೀತಿಯಲ್ಲಿ ಹೋರಾಟದ ಭಾಗವಾಗಿ ಇತಿಹಾಸವನ್ನು ಬರೆಯುವನು. ಯುವಶಕ್ತಿ ಮತ್ತು ಹಿರಿಯ ತಲೆಗಳ ಅಪರೂಪದ ಸಮಾಗಮ ಈ ಹೋರಾಟದ ಉಸಿರು. ಶಂಕರ ಮತ್ತು ಶೇಖರ ಇಡೀ ಹೋರಾಟಕ್ಕೆ ಒಂದು ಅರ್ಥವಂತಿಕೆಯನ್ನು ತಂದುಕೊಟ್ಟ ಯುವಕರು. ವೈಯಕ್ತಿಕ ಕರೆಗಳನ್ನು ಮೀರಿ ನಾಡಿನ ಕರೆಗೆ ಸ್ಪಂದಿಸಿ ಇಡೀ ಊರಿಗೆ ಆದರ್ಶಪ್ರಾಯರಾಗುತ್ತಾರೆ.




**ಹಾವಳಿ**
ಲೇ: ಮಲ್ಲಿಕಾರ್ಜುನ ಹಿರೇಮಠ
ಬೆ: ₹ 400;
ಪ್ರ: ಮನೋಹರ ಗ್ರಂಥಮಾಲಾ.
ಫೋನ್: 9845447002